ದಿನಾಂಕಃ 31-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.**ಆರ್.ಆರ್ 1** ನೇ ಪ್ರತಿವಾದಿ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಬೋರ್ವೆಲ್ ಅನ್ನು ಸುಮಾರು 3 ವರ್ಷಗಳ ಹಿಂದೆ ಅಳವಡಿಸಿದ್ದೇನೆ. ಸದರಿ ಬೋರ್ವೆಲ್ 750 ಅಡಿ ಆಳವಿರುತ್ತದೆ. ಸದರಿ ಬೋರ್ವೆಲ್ ನಲ್ಲಿ 41 ಅಡಿ ಕೇಸಿಂಗ್ ಅನ್ನು ಅಳವಡಿಸಲಾಗಿದೆ. ಸದರಿ ಬೋರ್ವೆಲ್ ಗೆ ಸಂಬಂಧಪಟ್ಟಂತೆ ಎಷ್ಟು ಹೆಚ್.ಪಿ ಸಾಮರ್ಥ್ಯದ ಪಂಪ್/ಮೋಟಾರ್ ಅನ್ನು ಅಳವಡಿಸಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಬೋರ್ವೆಲ್ ಗೆ ಪ್ರತಿವಾದಿಯು ಪಂಪ್/ಮೋಟರ್ ಅನ್ನು ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಬೋರ್ವಲ್ ಗೆ ಸಂಬಂಧಪಟ್ಟಂತೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದೇನೆ. ಸದರಿ ಅರ್ಜಿಯ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಬೋರ್ವೆಲ್ ಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾದಲ್ಲಿ ಮೊದಲು ಆ ಬೋರ್ವೆಲ್ ಗೆ ಪಂಪ್/ಮೋಟಾರ್ ಅನ್ನು ಅಳವಡಿಸಿರಬೇಕು ಎಂದರೆ ಸರಿ. ನಾನು ಅಳವಡಿಸಿರುವ ಬೋರ್ವೆಲ್ ಗೆ ಪ್ರತಿವಾದಿಯು ಪಂಪ್/ಮೋಟಾರ್ ಅನ್ನು ಹಾಕಿಕೊಂಡು ನೀರನ್ನು ಉಪಯೋಗಿಸುತ್ತಿದ್ದಾರೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ಬಲವಂತವಾಗಿ ಪಂಪ್/ಮೋಟಾರ್ ಅನ್ನು ಹಾಕಿಕೊಂಡರು ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡಿದ ನಂತರ ಪ್ರತಿವಾದಿಯು ಸದರಿ ಪಂಪ್/ಮೋಟಾರ್ ಅನ್ನು ಅಳವಡಿಸಿರುತ್ತಾರೆ.

ಪ್ರತಿವಾದಿಯು ಸದರಿ ಪಂಪ್/ಮೋಟಾರ್ ಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದಾರೆ. ದಾವಾ ಆಸ್ತಿಯಲ್ಲಿ ನಾನು ಯಾವುದೇ ಬೋರ್ವೆಲ್ ಅನ್ನು ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಕಾಣಿಸುವ ಬೋರ್ವೆಲ್ ಅಳವಡಿಸುವ ಯಂತ್ರದ ಮೂಲಕ ಪ್ರತಿವಾದಿಯು ತನ್ನ ಜಮೀನಿನಲ್ಲಿ ಬೋರ್ವೆಲ್ ಅನ್ನು ಅಳವಡಿಸುತ್ತಿದ್ದಾಗ ಅದರ ಚಿತ್ರವನ್ನು ಸೆರೆಹಿಡಿದು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಸದರಿ ಬೋರ್ವೆಲ್ ಅನ್ನು ಅಳವಡಿಸಲಾಗಿದೆ. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯ ಜಮೀನು ಇರುತ್ತದೆ. ಬೋರ್ವೆಲ್ ಅನ್ನು ಪ್ರತಿವಾದಿಯ ಜಮೀನಿನಲ್ಲಿ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪಂಪ್/ಮೋಟಾರ್ ಅನ್ನು ಖರೀದಿಸಿರುವುದಿಲ್ಲ. ಪ್ರತಿವಾದಿಯಿಂದ ನನಗೆ ಯಾವುದೇ ತೊಂದರೆ ಆಗದಿದ್ದರೂ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಅ.ದಾ. ಸಂಃ 219/2019 ಪಿ.ಡಬ್ಲ್ಯು: 01

ನಾನು ಹಾಜರುಪಡಿಸಿರುವ ನಿಪಿ-3 ರ ಪ್ರಕಾರ ಹಳೇ ಸರ್ವೆ ನಂ. 15 ರಲ್ಲಿ ಹೊಸ ಸರ್ವೆ ನಂ. 240 ರ ಜಮೀನಿನ ಪಹಣಿ ಪೋಡಿಯಾಗಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು ಬೋರ್ವೆಲ್ ಅನ್ನು ಅಳವಡಿಸಿದೆನು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ಪ್ರತಿವಾದಿಯ ಜಮೀನಿನಲ್ಲಿ ಅಳವಡಿಸಿರುವ ಬೋರ್ವೆಲ್ ಅನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಬೋರ್ವೆಲ್ ಪ್ರತಿವಾದಿಯ ಜಮೀನಿನಲ್ಲಿರುವುದೆಂದು ಸ್ಥಳ ತನಿಖೆಯ ಮೂಲಕ ಕಂಡುಬಂದಿದೆ ಎಂದು ಕೆ.ಇ.ಬಿ ಅವರು ಹಿಂಬರಹವನ್ನು ನೀಡಿದ್ದಾರೆ ಎಂದರೆ ಸಾಕ್ಷಿ ದಾವಾ ಸ್ವತ್ತಿಗೆ ವಿಧ್ಯುತ್ ಸಂಪರ್ಕ ಕಲ್ಪಿಸಬೇಡಿ ಎಂದು ನ್ಯಾಯಾಲಯದ ಮೂಲಕ ಕೆ.ಇ.ಬಿ ಅವರನ್ನು ಕೇಳಿಕೊಂಡರೂ ವಿಧ್ಯುತ್ ಸಂಪರ್ಕವನ್ನು ಪ್ರತಿವಾದಿಗೆ ಹೇಗೆ ಕಲ್ಪಿಸಿದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಯಾವುದೇ ಬೋರ್ವೆಲ್ ಇರುವುದಿಲ್ಲ ಹಾಗೂ ಪ್ರತಿವಾದಿಯು ತನ್ನ ಬೋರ್ವೆಲ್ ನಲ್ಲಿ ಪಂಪ್/ಮೋಟಾರ್ ಹಾಕಿಕೊಂಡು ನೀರನ್ನು ಉಪಯೋಗಿಸುತ್ತಿರುವುದರಿಂದ ನನಗೆ ಯಾವುದೇ ತೊಂದರೆ ಆಗಿಲ್ಲದಿದ್ದರೂ ತೊಂದರೆ ನೀಡಿದರು ಎಂದು ಸುಳ್ಳು ಅಂಶಗಳನ್ನು ಒಳಗೊಂಡಂತೆ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಯಾವುದೇ ಬೋರ್ವೆಲ್ ಅನ್ನು ಅಳವಡಿಸದಿದ್ದರೂ ಅಳವಡಿಸಿದ್ದೇನೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದ ಮೂಲಕ ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಯ ಸರ್ವೆಗೆ ನನಗೆ ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು